# ಕರ್ನಾಟಕ ಪರೀಕ್ಷಾ ಪ್ರಾಧಿಕಾರ
# Karnataka Examinations Authority

ಸಂಖ್ಯೆ: ಇಡಿ/ಕೆಇಎ/ಪತ್ರಿಕಾ ಪ್ರಕಟಣೆ/2020 ದಿನಾಂಕ: 16-09-2020

**ಪತ್ರಿಕಾ ಪ್ರಕಟಣೆ**

**ಪಿಜಿಸಿಇಟಿ – 2020 – ಪರಿಷ್ಕರಿಸಿದ ವೇಳಾಪಟ್ಟಿ – ಅನ್‌ಲೈನ್ ಅರ್ಜಿ ಸಲ್ಲಿಸಲು ಅವಧಿ ವಿಸ್ತರಣೆ**

2020ನೇ ಸಾಲಿನ ಎಂಬಿಎ, ಎಂಸಿಎ, ಎಂಇ / ಎಂಟೆಕ್ / ಎಂ.ಆರ್ಕ್ ಕೋರ್ಸ್‌ಗಳ ಪ್ರವೇಶಾತಿಗೆ ದಿನಾಂಕ 08-08-2020 ರಂದು ಮತ್ತು 09-08-2020 ರಂದು ನಡೆಸಲು ನಿಗದಿಪಡಿಸಿದ್ದ ಪಿಜಿಸಿಇಟಿ – 2020 ರ ಪರೀಕ್ಷೆಯನ್ನು ರಾಜ್ಯದಲ್ಲಿನ ಕೋವಿಡ್-19 ಹಿನ್ನಲೆಯಲ್ಲಿ ಮುಂದೂಡಿ ದಿನಾಂಕ 06-10-2020 ಮತ್ತು 07-10-2020 ರಂದು ನಡೆಸಲು ವೇಳಾಪಟ್ಟಿಯನ್ನು ಪ್ರಕಟಿಸಲಾಗಿತ್ತು.

ಆದರೆ ಅದೇ ದಿನಾಂಕಗಳಂದು ಕೆಲವು ವಿಶ್ವವಿದ್ಯಾಲಯದ ಹಾಗೂ ಇತರೆ ಇಲಾಖೆಯ ಪರೀಕ್ಷೆಗಳನ್ನು ನಡೆಸಲು ನಿಗದಿಯಾಗಿರುವುದರಿಂದ, ಅಭ್ಯರ್ಥಿಗಳ ಮನವಿಗಳನ್ನು ಪರಿಗಣಿಸಿ, ಸರ್ಕಾರದ ಅನುಮೋದನೆಯಂತೆ ಪಿಜಿಸಿಇಟಿ 2020ರ ಪರೀಕ್ಷೆಯನ್ನು ದಿನಾಂಕ 13-10-2020 ಮತ್ತು 14-10-2020 ರಂದು ಈ ಕೆಳಗಿನ ವೇಳಾಪಟ್ಟಿಯಂತೆ ನಡೆಸಲಾಗುವುದು.

ಪಿಜಿಸಿಇಟಿ-2020 ಪ್ರವೇಶಾತಿಗೆ ಅರ್ಜಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಅಂತಿಮ ಅವಕಾಶ ಕಲ್ಪಿಸಲಾಗಿದೆ. ಇಲ್ಲಿಯವರೆಗೆ ಪಿಜಿಸಿಇಟಿ-2020 ಕ್ಕೆ ಅರ್ಜಿ ಸಲ್ಲಿಸದೇ ಇರುವ ಅಭ್ಯರ್ಥಿಗಳು ದಿನಾಂಕ 16-09-2020 ರ ಸಂಜೆ 7.30 ನಂತರ ದಿನಾಂಕ 21-09-2020 ಸಂಜೆ 5.30 ರವರೆಗೆ ಆನ್‌ಲೈನ್ ಮೂಲಕ ಸಲ್ಲಿಸಿ, ದಿನಾಂಕ 22-09-2020 ರೊಳಗಾಗಿ ಶುಲ್ಕವನ್ನು ಪಾವತಿಸಬಹುದು. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿರುವ ಆದರೆ ಇಲ್ಲಿಯವರೆಗೆ ಶುಲ್ಕ ಪಾವತಿಸದೇ ಇರುವ ಅಭ್ಯರ್ಥಿಗಳೂ ಸಹ ಶುಲ್ಕವನ್ನು ಪಾವತಿಸಬಹುದು.

ಪಿಜಿಸಿಇಟಿ-2020 ರ ಪರಿಷ್ಕರಿಸಿದ ವೇಳಾಪಟ್ಟಿ

| ದಿನಾಂಕ / ದಿನ | ಕೋರ್ಸ್‌ಗಳು | ವಿಷಯ | ಸಮಯ | ಅಂಕಗಳು |
|---|---|---|---|---|
| 13-10-2020 TUESDAY | M.E. / M. Tech / M. Arch | **Type-B:** Courses offered by Department of Post Graduate Studies and Research in Mathematics and Computer Science, Kuvempu University and Department of Studies in Computer Science, University of Mysore. | 10.30 am to 12.30 pm | 100 |
| | | **Type-A:** Courses offered by VTU, UVCE, UBDTCE. | 02.30 pm to 04.30 pm | 100 |
| 14-10-2020 WEDNESADY | MCA | Admission to 1st Year / 1st Semester | 10.30 am to 12.30 pm | 100 |
| | MBA | Admission to 1st Year / 1st Semester | 2.30 pm to 4.30 pm | 100 |

ವಿವರವಾದ ಮಾಹಿತಿಯನ್ನು ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ನಲ್ಲಿ ಪಡೆಯಬಹುದು. ಈ ಮೊದಲು 10-06-2020 ರ ಅಧಿಸೂಚನೆಯಲ್ಲಿ ನೀಡಿದ್ದ ಇತರೆ ಎಲ್ಲಾ ಸೂಚನೆಗಳು / ಮಾರ್ಗದರ್ಶಿಗಳು ಅನ್ವಯಿಸುತ್ತದೆ.

ಸಹಿ/-
ಕಾರ್ಯನಿರ್ವಾಹಕ ನಿರ್ದೇಶಕರು.


**18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012**

18th Cross, Sampige Road, Malleshwaram, Bengaluru – 560 012.

Phone: 080-2356 4583, 2336 1786, Fax: 080-2346 1576

e-mail : keauthority-ka@nic.in Website : http://kea.kar.nic.in